O.S. ಃ 25/2017
DW1

ದಿನಾಂಕಃ 01.02.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಸಿ.ಎಸ್.ಆರ್ ವಕೀಲರಿಂದಃ

ವಾದಿ ಆರೋಪಿಯು ಸರಿ ಇಲ್ಲದ ಕಾರಣ ಮತ್ತು ವಾದಿಯ ಅಣ್ಣನಿಗೆ ನಾನು ಪರಿಚಯಸ್ಥನಾದ ಕಾರಣ ನನ್ನ ಹೆಸರಿಗೆ ವಾದಿ ಜಿ.ಪಿ.ಎ ಮಾಡಿಕೊಟ್ಟಿರುತ್ತಾರೆ. ವಾದಿಗೆ ಆರೋಗ್ಯ ಸರಿಇಲ್ಲ ಮತ್ತು ಆಕೆಯ ಅಣ್ಣ ನನ್ನ ಸ್ನೇಹಿತ ಎಂದು ಈ 2 ವಿಚಾರಗಳನ್ನು ಅವರು ಜಿ.ಪಿ.ಎ ನಲ್ಲಿ ಹೇಳಿಲ್ಲ. ವಾದಿಗೆ ಈ ನ್ಯಾಯಾಲಯದ ಮುಂದೆ ಹಾಜರಾಗಲು ಯವುದೇ ತೊಂದರೆ ಇಲ್ಲ ಎಂದರೆ ಒಂದು ವಾರ ಕಾಲವಕಾಶ ನೀಡಿದರೆ ಅವರನ್ನು ಈ ನ್ಯಾಯಾಲಯದ ಮುಂದೆ ಹಾಜರಾಗಲು ಹೆಳಿರುತ್ತೇನೆ ಮತ್ತು ಅವರು ಈ ನ್ಯಾಯಾಲಯದ ಮುಂದೆ ಸಾಕ್ಷ್ಯ ನುಡಿಯಬಹುದು. ವಾದಿಯು ನಿಪಿ-1ನ್ನು ಬರೆದುಕೊಟ್ಟಿಲ್ಲ ಬದಲಿಗೆ ನಾನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

4ನೇ ಪ್ರತಿವಾದಿಯು ದಾವಾ ಸ್ವತ್ತನ್ನು ಕ್ರಯಕ್ಕೆ ಪಡೆದ ದಿನದಿಂದಲೂ ಇಲ್ಲಿಯವರೆಗೂ ಸ್ವಾದೀನದಲ್ಲಿದ್ದಾರೆ ಎಂದರೆ ಸರಿ. 1ನೇ ಪ್ರತಿವಾದಿಯಿಂದ 2ನೇ ಪ್ರತಿವಾದಿ ಜಿ.ಪಿ.ಎ ಮೂಲಕ ದಾವಾ ಸ್ವತ್ತನ್ನು ವಾದಿಗೆ ಮಾರಾಟ ಮಾಡಿದರು. ವಾದಿಯು ದಾವಾ ಸ್ವತ್ತನ್ನು ಖರೀದಿಸಿದ ನಂತರ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ, ವಾದಿಯು ಸ್ವಾಧೀನಕ್ಕೆ ಬಂದಾಗ ಶಿವಾನಂದ ಮತ್ತು ಅವರ ಪರಿವಾರದವರು ಅಂದೆರ 4ನೇ ಪ್ರತಿವಾದಿಗಳು ಗಲಾಟೆ ಮಾಡಿರುತ್ತಾರೆಂದು ವಾದಿ ನನಗೆ ಹೇಳಿರುತ್ತಾರೆ.

ವಾದಿಯು ಎಲ್ಲಿಯವರೆಗೂ ವಿಧ್ಯಾಭ್ಯಾಸ ಮಾಡಿರುತ್ತಾರೆಂದು ನನಗೆ ಗೋತ್ತಿಲ್ಲ. ಅವರು ಏನು ಓದಿರುತ್ತಾರೆ ಎಂಬುದನ್ನು ನಾನು ಕೇಳಿ ತಿಳಿದುಕೊಳ್ಳುತ್ತೇನೆ. ದಾವಾ ಸ್ವತ್ತಿನಲ್ಲಿ ಹಾಲಿ ಇರುವವರು ವಾದಿಯ ವಿರುದ್ಧ ಗಲಾಟೆ ಮಾಡಿರುತ್ತಾರೆಂದು ವಾದಿಯು ಯಾವುದೇ ದೂರನ್ನು ಕೊಟ್ಟಿಲ್ಲ, ತಹಶಿಲ್ದಾರ್ ರವರಿಗೆ ಕೊಟ್ಟಿರುತ್ತಾರೆ. 2ನೇ ಪ್ರತಿವಾದಿಯು ಸಹ ದಾವಾ ಸ್ವತ್ತಿನ ಸ್ವಧೀನದಲ್ಲಿ ಇರಲಿಲ್ಲ ಎಂದರೆ ಆಸ್ತಿಯು ಖಾಲಿ ಇತ್ತು. ಹಾಲಿ 4ನೇ ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಮನೆಯನ್ನು ಕಟ್ಟಿರುತ್ತಾರೆ ಮತ್ತು ಸಪೋಟ ತೆಂಗು ಮತ್ತು ಮಾವು ಬೇಳೆಯುತ್ತಿದ್ದಾರೆ. ಆ ಮರಗಳಿಗೆ ಸುಮಾರು 10 ವರ್ಷಗಳಾಗಿರುತ್ತದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಯಳಂದೂರು.